ಓಎಸ್ 180/2022 ಪಿ ಡಬ್ಲ್ಯೂ 1 ಪುಷ್ಪವಿಕಾಸಿನಿ @ ಬೆಟ್ಟಮ್ಮ

ದಿನಾಂಕ 04.12.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ</u>** ಪ್ರತಿವಾದಿ-11 ರವರ ಪರ ಶ್ರೀ ಪಿ.ಜಿ. ವಕೀಲರಿಂದಃ

ನಾನು 1999 ರಿಂದ ಮೈಸೂರಿನಲ್ಲಿ ವಾಸವಾಗಿದ್ದೇನೆ. ನನ್ನ ತಂದೆ ತೀರಿ ಹೋದಾಗ ನಾನು 9 ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದೆ, ನನ್ನ ಮದುವೆ ಆಗಿರಲಿಲ್ಲ. ನನ್ನ ಮದುವೆಯು 1999 ರಲ್ಲಿ ಅಂತರಜಾತಿ ವಿವಾಹವಾಗಿರುತ್ತದೆ. ನನ್ನ ತಂದೆ-ತಾಯಿ, ಸೋದರ-ಸೋದರಿಯರು ನಿಂತು ನನ್ನ ಮದುವೆಯನ್ನು ಮಾಡಿರುವುದಿಲ್ಲ. ಇಲ್ಲಿಯವರೆಗೂ ನನ್ನ ತಂದೆಯ ಕುಟುಂಬದವರೊಂದಿಗೆ ನನಗೆ ಯಾವುದೇ ಸಂಪರ್ಕ ಇರುವುದಿಲ್ಲ. ದಿನಾಂಕಃ 18.08.2005 ರಂದು ಪ್ರತಿವಾದಿ-1 ರಿಂದ 5 ರವರು ನಾವೇ ಮಾತ್ರ ಗೌಡಪ್ಪರವರ ವಾರಸುದಾರರು ಎಂದು ನೋಂದಾಯಿತ ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅದು ನನ್ನ ಗಮನಕ್ಕೆ ಬಂದಿರುವುದಿಲ್ಲ ಎಂದು ಹೇಳುತ್ತಾರೆ. ನನಗೆ ಈ ರೀತಿ ವಿಭಾಗ ಆಗಿರುವುದು 2022 ರಲ್ಲಿ ಗೊತ್ತಾಗಿರುತ್ತದೆ. ನನ್ನನ್ನು ಸದರಿ ವಿಭಾಗದಿಂದ ನಾನು ಅಂತರಜಾತಿ ವಿವಾಹವಾಗಿದ್ದುದರಿಂದ ಮತ್ತು ಅವರಿಗೆ ಆ ರೀತಿ ಆಗಿದ್ದುದು ಇಷ್ಟವಿಲ್ಲದೇ ಇದ್ದುದರಿಂದ ಬಿಟ್ಟು ವಿಭಾಗ ಮಾಡಿಕೊಂಡಿರುತ್ತಾರೆ. ಆ ರೀತಿ ನನ್ನನ್ನು ಬಿಟ್ಟು ವಿಭಾಗ ಮಾಡಿಕೊಂಡಿರುವುದರಿಂದ ನನಗೆ ಮೋಸ ಆಗಿರುತ್ತದೆ. ವಿಭಾಗ ಪತ್ರದಂತೆ ವಿಭಾಗ ಮಾಡಿಕೊಂಡ ನಂತರ ಖಾತೆ ಮಾಡಿಕೊಂಡು ಅವರವರ ಹಿಸ್ಸೆಗೆ ಬಂದ ಆಸ್ತಿಗಳನ್ನು ಅನುಭವಿಸುತ್ತಿದ್ದಾರೆ ಎಂದರೆ ಸಾಕ್ಷಿಯು ನನ್ನ ಗಮನಕ್ಕೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ 2022 ರಲ್ಲಿ ಭಾಗದ ಪ್ರಕಾರ ಖಾತೆ ಮಾಡಿಕೊಂಡಿರುತ್ತಾರೆಂದು ಗೊತ್ತಾಗಿರುತ್ತದೆ.

ದಾವಾ ಐಟಂ ನಂ.2, ಸರ್ವೆ ನಂ.714 ರಲ್ಲಿ ಒಟ್ಟು 3.29 ಗುಂಟೆ ಜಮೀನು ಇರುತ್ತದೆ. ಅದರಲ್ಲಿ 29 ಗುಂಟೆ ಜಮೀನು 1 ನೇ ಪ್ರತಿವಾದಿ ಚಾಮಮ್ಮರವರಿಗೆ ಬಂದಿರುತ್ತದೆ. ಆದರೆ ಅದು ನನ್ನ ಗಮನಕ್ಕೆ ಬಂದಿರಲಿಲ್ಲ. ಸದರಿ ಸರ್ವೆ ನಂಬರಿನಲ್ಲಿ 3 ನೇ ಪ್ರತಿವಾದಿಗೆ 1 ಎಕರೆ, 4 ನೇ ಪ್ರತಿವಾದಿಗೆ 1 ಎಕರೆ, 5 ನೇ ಪ್ರತಿವಾದಿಗೆ 1 ಎಕರೆ ಬಂದಿದ್ದು, ಆ ಪ್ರಕಾರ ಖಾತೆ ಮಾಡಿಕೊಂಡು ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿ. ಸರ್ವೆ ನಂ.714 ನ್ನು ಪೋಡು ಮಾಡಿಕೊಂಡು ಸರ್ವೆ ನಂ.714/1, 714/2, 714/3, 714/4 ಎಂದು

ಸ್ವಾಧೀನದಲ್ಲಿರುತ್ತಾರೆ. ಭಾಗದ ಪ್ರಕಾರ ಸರ್ವೆ ನಂ.714/4 ರಲ್ಲಿ 1 ಎಕರೆ 5 ನೇ ಪ್ರತಿವಾದಿಗೆ ವಿಭಾಗಾದಲ್ಲಿ ಬಂದ ಜಮೀನು ಎಂದರೆ ಸರಿ. ಸದರಿ ಜಮೀನನ್ನು 5 ನೇ ಪ್ರತಿವಾದಿ ಮತ್ತು ಆತನ ಹೆಂಡತಿ ಮಕ್ಕಳಾದ 6 ರಿಂದ 9 ನೇ ಪ್ರತಿವಾದಿಗಳು ಸೇರಿ 10 ಪ್ರತಿವಾದಿಗೆ ದಿಃ 17.09.2018 ರಲ್ಲಿ ನೋಂದಾಯಿತ ಕ್ರಯಪತ್ರದ ಮುಖಾಂತರ ರೂ.12,30,000/- ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು 1 ಜೆರಾಕ್ಸ್ ವಂಶವೃಕ್ಷವನ್ನು ನೋಡಿ ನನ್ನನ್ನು ಬಿಟ್ಟು ನನ್ನ ತಮ್ಮ ವಂಶವೃಕ್ಷವನ್ನು ಹಾಜರುಪಡಿಸಿ ಮಾರಾಟ ಮಾಡಿರುತ್ತಾರೆಂದು ಒಪ್ಪಿಕೊಂಡಿರುವುದರಿಂದ, ಸದರಿ ವಂಶವೃಕ್ಷದ ಪ್ರತಿಯನ್ನು **ನಿಡಿ-1** ಎಂದು ಗುರುತಿಸಲಾಯಿತು. ವಿಭಾಗ ಪತ್ರ ಹಾಗೂ ವಂಶವೃಕ್ಷವನ್ನು ನೋಡಿ ಜಯಮ್ಮರವರು ನಂಬಿಕೆಯ ಮೇರೆಗೆ 1 ಎಕರೆ ಜಮೀನನ್ನು ಖರೀದಿಸಿದ್ದರು ಎಂದರೆ ಸುಳ್ಳು. ವಿಭಾಗ ಪತ್ರ ಹಾಗೂ ವಂಶವೃಕ್ಷದಲ್ಲಿರುವ ಸಂಗತಿಗಳು ಸರಿಯಿರುತ್ತವೆ ಎಂದು ಕಂಡು ಬಂದಿದ್ದರಿಂದಲೇ ನಂಬಿಕೆಯ ಮೇರೆಗೆ ಖರೀದಿ ಮಾಡಿದ್ದಾರೆ ಎಂದರೆ ಸುಳ್ಳು.

ಸದರಿ ಆಸ್ತಿಯನ್ನು ದಿಃ19.08.2022 ರಂದು ನೋಂದಾಯಿತ ಕ್ರಯಪತ್ರದ ಮುಖಾಂತರ ರೂ.25 ಲಕ್ಷ ಹಣಕ್ಕೆ 10 ನೇ ಪ್ರತಿವಾದಿಯು 11 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಗಮನಕ್ಕೆ ಬಂದಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಚಾರ ಈ ಕೇಸು ಹಾಕುವ ಪೂರ್ವದಲ್ಲಿ ನನಗೆ ಗೊತ್ತಾಗಿರುತ್ತದೆ. 10 ನೇ ಪ್ರತಿವಾದಿಯು 2022 ರವರಗೆಗೆ ಸದರಿ ಆಸ್ತಿಯಲ್ಲಿ ಮಾಲೀಕರಾಗಿ ಶಾಂತಿಯುತ ಸ್ವಾಧೀನಾನುಭವದಲ್ಲಿದ್ದರು, ಅವರು 11 ನೇ ಪ್ರತಿವಾದಿಗೆ ಮಾರಾಟ ಮಾಡಿದ ನಂತರ 11 ನೇ ಪ್ರತಿವಾದಿಯು ಕ್ರಯಪತ್ರದಂತೆ ಖಾತೆ ಬದಲಾವಣೆ ಮಾಡಿಕೊಂಡು ಅಂದಿನಿಂದಲೂ ಮಾಲೀಕರಾಗಿ ಶಾಂತಿಯುತ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. 11 ನೇ ಪ್ರತಿವಾದಿಗೆ ಸರ್ವೆ ನಂಬರ್ 714 ರಲ್ಲಿಯ ಉತ್ತರ ಭಾಗದ 1 ಎಕರೆ ಜಮೀನು ವಿರಿಜಾ ನಾಲೆ ಪಕ್ಕ ಇದೆ ಎಂದರೆ ಸರಿ. ದಕ್ಷಿಣಕ್ಕೆ 2 ಎಕರೆ 29 ಗುಂಟೆ ಜಮೀನು ನನ್ನ ತಾಯಿ, ನನ್ನ ಸಹೋದರ, ಸಹೋದರಿಯರ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಉಳಿದ ಆಸ್ತಿಯಲ್ಲಿ ಭಾಗ ತೆಗೆದುಕೊಳ್ಳಬಹುದು ಎಂದರೆ ಸಾಕ್ಷಿಯು ರಾಮಚಂದ್ರರವರು ಅಕ್ರಮವಾಗಿ ಆಸ್ತಿ ತೆಗೆದುಕೊಂಡಿರುವುದರಿಂದ ಪೂರ್ಣ ಆಸ್ತಿಯಲ್ಲಿ ಭಾಗ ಬೇಕು ಎಂದು ಹೇಳುತ್ತಾರೆ. 10 ಮತ್ತು 11 ನೇ ಪ್ರತಿವಾದಿಗಳು ನಂಬಿಕೆಯಿಂದ ಕ್ರಯ ಮಾಡಿಕೊಂಡಿರುವ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು, ಆಸಕ್ತಿ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ-10 ಮತ್ತು 11 ರಿಂದ ನನಗೆ ಯಾವುದೇ ಮೋಸ ಉಂಟಾಗಿಲ್ಲ, ನನ್ನ ಕುಟುಂಬದ ಸದಸ್ಯರಿಂದ ಮೋಸ ಉಂಟಾಗಿದೆ ಎಂದರೆ ಸರಿಯಲ್ಲ.

ಇತರ ಪ್ರತಿವಾದಿಗಳ ಪರ ವಕೀಲರು ಗೈರು ಹಾಜರಿರುವುದರಿಂದ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಃ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ

ಅಪರ ಹಿರಿಯ ಸಿಜೆ, ಶ್ರೀರಂಗಪಟ್ಟಣ